**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ 92/2021**

ಡಿ ಡಬ್ಲ್ಯೂ 01

ಹೆಸರು : ಈರಯ್ಯ ಚನ್ನಬಸಯ್ಯ ಹಿರೇಮಠ
ವಯಸ್ಸು : 39 ವರ್ಷ
ಉದ್ಯೋಗ : ಹೆಸ್ಕಾಂ ಸಿಬ್ಬಂದಿ
ವಾಸಸ್ಥಳ : ಶಿಗ್ಗಾಂವ

ದಿನಾಂಕ : 29.08.2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದಃ**

ದೂರುದಾರಳು ನನಗೆ ಯಾವುದೇ ಸಂಬಂಧ ಇರುವುದಿಲ್ಲಾ. ದೂರುದಾರಳಿಗೂ ಮತ್ತು ನನಗೂ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲಾ. ಈ ಪ್ರಕರಣದಲ್ಲಿಯ ಚೆಕ್ಕನ್ನು ನಾನು ಎಂ ಎನ್ ಕಾಗಿನೆಲೆ ಮೆಕ್ಯಾನಿಕ ಹೆಸ್ಕಾಂ ಸ್ಟೊರ ಕೀಪರ ರಾಣೇಬೆನ್ನೂರ ಇವರಿಗೆ 2015 ರಲ್ಲಿ ಚೆಕ್ಕನ್ನು ನೀಡಿರುತ್ತೇನೆ. 2015 ರಲ್ಲಿ ನನಗೂ ಮತ್ತು ಎಂ ಎನ್ ಕಾಗಿನೆಲೆ ಇವರ ಮಧ್ಯ ಇರುವ ಹಣದ ವ್ಯವಹಾರ ಮುಕ್ತಾಯವಾಗಿರುತ್ತದೆ. 2015 ರಲ್ಲಿ ನನ್ನ ಎಚ್ ಡಿ ಎಫ್ ಸಿ ಬ್ಯಾಂಕ ದಾವಣಗೆರೆ ಖಾತೆ ಮುಕ್ತಾಯವಾಗಿರುತ್ತದೆ. ಎಂ ಎನ್ ಕಾಗಿನೆಲೆ ಇವರಿಗೆ ನನ್ನ ಖಾತೆ ಮುಕ್ತಾಯವಾಗಿದೆ ಆದ್ದರಿಂದ ಚೆಕ್ಕನ್ನು ಮರಳಿಸಲು ಕೇಳಿಕೊಂಡಾಗ ನಾವು ಮನೆ ಬೇರೆ ಮಾಡಿದ್ದೇವೆ ಹುಡುಕಾಡಿ ಕೊಡುತ್ತೇನೆ ಅಂತಾ ಹೇಳಿರುತ್ತಾರೆ. ಎಂ ಎನ್ ಕಾಗಿನೆಲೆ ರವರಿಗೆ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲಾ. ನನ್ನ ತಂದೆ ಮತ್ತು ಎಂ ಎನ್ ಕಾಗಿನೆಲೆ ರವರು ಒಂದೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಆದ್ದರಿಂದ ಅವರ ಮೇಲಿನ ನಂಬಿಕೆಯಿಂದ ಎರಡು ಬಾರಿ ಕೇಳಿದಾಗ ಚೆಕ್ಕನ್ನು ಹುಡುಕಿ ಕೊಡುತ್ತೇನೆ ಅಂತಾ ಹೇಳಿದರು. ಸದರಿ ನಂಬಿಕೆಯ ಮೇಲೆ ಚೆಕ್ಕನ್ನು ಎಂ ಎನ್ ಕಾಗಿನೆಲೆ ಅವರ ಹತ್ತಿರ ಬಿಟ್ಟಿರುತ್ತೇನೆ. ದೂರುದಾರರು ಕಳುಹಿಸಿದ ನೋಟಿಸಿನ ಸ್ವೀಕೃತಿಗೆ ನಾನು ಸಹಿ ಮಾಡಿರುವುದಿಲ್ಲಾ. ಯಾರೋ ಬೇರೆ ವ್ಯಕ್ತಿಗಳು ಸಹಿ ಮಾಡಿರುತ್ತಾರೆ. ನಾನು ಶಿಗ್ಗಾಂವದಲ್ಲಿ ಕೆಲಸ

ಮಾಡುತ್ತಿದ್ದರಿಂದ ಬ್ಯಾಡಗಿಯಲ್ಲಿ ದೂರುದಾರಳು ನನಗೆ ಪರಿಚಯ ಇರುವುದಿಲ್ಲಾ. ಎಂ ಎನ್ ಕಾಗಿನೆಲೆ ಅವರ ಮಗ ಸಾಧೀಕ ಕಾಗಿನೆಲೆ ಇವರು ಈ ಪ್ರಕರಣದ ಚೆಕ್ಕನ್ನು ದೂರುದಾರರಿಗೆ ಕೊಟ್ಟು ನನ್ನ ಮೇಲೆ ನಾನು ಸರ್ಕಾರಿ ಕೆಲಸದಲ್ಲಿ ಇರುವುದರಿಂದ ಈ ಚೆಕ್ಕಿನ ಪ್ರಕರಣವನ್ನು ದಾಖಲಿಸಿರುತ್ತಾರೆ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆಗೊಳಿಸಲು ಕೇಳಿಕೊಂಡಿರುತ್ತೇನೆ. ಇಂದು ಈ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿ ಗುರುತಿಸುತ್ತೇನೆ. ಸಿ.ಸಿ.ನಂಬರ 29/2021 ರ ದೂರು, ಹಿಂಬರಹ, ನೋಟಿಸಿನ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-03 ರಿಂದ 05 ಎಂದು, ಸಿ.ಸಿ.ನಂಬರ 397/2016 ರ ತೀರ್ಪಿನ ನಕಲನ್ನು ಹಾಜರುಪಡಿಸಿದ್ದು  ಅದನ್ನು ನಿಡಿ-06 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆಗೊಳಿಸಲು ಕೇಳಿಕೊಂಡಿರುತ್ತೇನೆ.

**<u>ಪಾಟೀ ಸವಾಲು : ದೂರುದಾರರ ಪರ ವಕೀಲರಿಂದ :</u>**

ನಾನು ಕಿರಿಯ ಸಹಾಯಕರು ಹೆಸ್ಕಾಂ ಉಪ-ವಿಭಾಗ ಶಿಗ್ಗಾಂವದಲ್ಲಿ ಕೆಲಸ ಮಾಡುತ್ತೇನೆ ಅಂದರೆ ಸರಿ. ಈರಯ್ಯ ತಂದೆ ಚನ್ನಬಸಯ್ಯ ಹಿರೇಮಠ ಕಿರಿಯ ಸಹಾಯಕ ಶಿಗ್ಗಾಂವ ಎಂದು ನನ್ನ ಬಿಟ್ಟರೆ ಬೇರೆ ಯಾರು ಇರುವುದಿಲ್ಲಾ ಎಂದರೆ ಸರಿ. ನಿಪಿ-03 ರಂತೆ ದೂರುದಾರರು ನೋಟಿಸ ನೀಡಿದ್ದು ಅದು ನಿಪಿ-05 ರಂತೆ ನನಗೆ ತಲುಪಿದ್ದರು ಸಹ ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಿಪಿ-05 ರಂತೆ ನೋಟಿಸ ಮುಟ್ಟಿಲ್ಲಾ ಅಂತಾ ಅಂಚೆ ಇಲಾಖೆಯ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲಾ ಈ ಪ್ರಕರಣದಲ್ಲಿ ಹಾಜರಾದ ಮೇಲೆ ಅಂಚೆ ಇಲಾಖೆಯವರ ಮೇಲೆ ಕ್ರಮ ಕೈಗೊಳ್ಳಲು ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ. ನಿಪಿ-03 ಮುಟ್ಟಿದ್ದರು ಸಹ ದೂರುದಾರಳಿಗೆ ಮೋಸ ಮಾಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಎಂ ಎನ್ ಕಾಗಿನೆಲೆ ರವರಿಗೆ 2015 ರಲ್ಲಿ ಚೆಕ್ಕ ಕೊಟ್ಟಿದ್ದು ಅವರು ಮರಳಿಕೊಟ್ಟಿಲ್ಲಾ ಅಂತಾ ಕಾನೂನು ನೋಟಿಸು ನೀಡಿರುವುದಿಲ್ಲಾ ಕಾರಣ ಅವರ ಮೇಲೆ ನಂಬಿಕೆ ಇತ್ತು. ನಾನು 2-

3 ಬಾರಿ ಕೇಳಿದ ನಂತರ ಚೆಕ್ಕ ಕೊಡದೆ ಇದ್ದಾಗ ನಾನು ನೋಟಿಸ ಕೊಡಲು ಯಾವುದೇ ತೊಂದರೆ ಇರಲಿಲ್ಲಾ ಅಂದರೆ ಸರಿ. ಸಾದೀಕ.ಎಂ.ಕಾಗಿನೆಲೆ ಇವನು ನನ್ನ ಚೆಕ್ಕನ್ನು ದೂರುಪಯೋಗ ಪಡಿಸಿಕೊಂಡಿದ್ದಾನೆ ಅಂತಾ ಆತನ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲಾ ದೂರುದಾರಳ ಹತ್ತಿರ ಹಣ ಪಡೆದು ಮತ್ತೇ ಹಣ ಮರಳಿಸಬೇಕಾಗುತ್ತದೆ ಅಂತಾ ನನ್ನದೆ ಆದ ಕಥೆ ಸೃಷ್ಟಿಮಾಡಿದ್ದೇನೆ ಅಂದರೆ ಸರಿಯಲ್ಲಾ. ದೂರುದಾರಳು ನನಗೆ ಪರಿಚಯ ಇಲ್ಲಾ ಮತ್ತು ನನ್ನ ಚೆಕ್ಕನ್ನು ದೂರುಪಯೋಗಪಡಿಸಿಕೊಂಡಿದ್ದಾಳೆ ಅಂತಾ ಅವಳ ಮೇಲೆ ಯಾವುದೇ ಪ್ರಕರಣ ದಾಖಲಿಸಿಲ್ಲಾ. ನಿಪಿ-01 ನನಗೆ ಸಂಬಂಧಿಸಿದ್ದು ಅಂದರೆ ಸರಿ. ನಿಪಿ-01 ರ ಮೇಲೆ ಸಹಿ ನನ್ನದು ಇರುತ್ತದೆ. ಸಾಕ್ಷಿಯು ಸದರಿ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-01(ಎ) ಎಂದು ಗುರುತಿಸಲಾಯಿತು. ನನಗೆ ಇಲಾಖೆಗೆ ಸಂಬಂಧಿಸಿದ ದಾಖಲೆಗಳು ಈರಯ್ಯ ಚನ್ನಬಸಯ್ಯ ಹಿರೇಮಠ ಕಿರಿಯ ಸಹಾಯಕರು ಹೆಸ್ಕಾಂ ಶಿಗ್ಗಾಂವ ಅಂತಾ ಬರುತ್ತವೆ ಅಂದರೆ ಸರಿ. ನಿಪಿ-03 ನನಗೆ ಮುಟ್ಟಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಿಡಿ-06 ಇದು ದೂರುದಾರಳು ವಿವಿಧ ಬ್ಯಾಂಕಗಳಲ್ಲಿ ಸಾಲ ಮಾಡಿ ನಂತರ ಅವಳ ಮೇಲೆ ಚೆಕ ಬೌನ್ಸ ಪ್ರಕರಣ ದಾಖಲಾಗಿ ಶಿಕ್ಷೆ ಆಗಿದ್ದನ್ನು ಹಾಜರುಪಡಿಸಿದ್ದು ಇರುತ್ತದೆ. ದೂರುದಾರಳ ಮೇಲೆ 2-3 ಪ್ರಕರಣಗಳು ದಾಖಲಾದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಿಡಿ-06 ನ್ನು ನಾನು ಅರ್ಧ ಓದಿ ತಿಳಿದುಕೊಂಡಿರುತ್ತೇನೆ. ಆದರೆ ಪೂರ್ತಿ ಮಾಹಿತಿ ಇರುವುದಿಲ್ಲಾ. ನಿಡಿ-03 ರಿಂದ 05 ಕ್ಕು ಮತ್ತು ಈ ಪ್ರಕರಣಕ್ಕು ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿ. ದೂರುದಾರಳಿಗೆ ಹಣ ಕೊಡಬೇಕಾಗುತ್ತದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ನನಗೆ ತಿಂಗಳಿಗೆ 70 ಸಾವಿರ ಸಂಬಳ ಇರುವುದರಿಂದ ದೂರುದಾರಳ ಕಡೆಯಿಂದ ಯಾವುದೇ ಹಣ ಪಡೆದಿಲ್ಲಾ ಅಂತಾ ನುಡಿಯುತ್ತಾರೆ. ನನ್ನ ಮೇಲೆ ಈ ನ್ಯಾಯಾಲಯದಲ್ಲಿ ಮತ್ತೊಂದು ಚೆಕ್ಕಿನ ಪ್ರಕರಣ ಚಾಲ್ತಿ ಇದೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ವಿಷಯ ಸುಳ್ಳು ಇದೆ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಜೆಎಂಎಫ್‌ಸಿ, ಬ್ಯಾಡಗಿ.